# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 165 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 05-12-2023 |
| ಉತ್ತರಿಸುವ ಸಚಿವರು | : | ಪೌರಾಡಳಿತ ಹಾಗೂ ಹಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಅಭಿಯಾನ (ನಗರ) ವನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ;<br>ಈ ಅಭಿಯಾನದ ಧ್ಯೇಯೋದ್ದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು **ಸ್ವಚ್ಛ ಭಾರತ ಮಿಷನ್ (ನಗರ)** ಯೋಜನೆಯನ್ನು 2ನೇ ಅಕ್ಟೋಬರ್ 2014 ರಂದು ಜಾರಿಗೊಳಿಸಿದ್ದು, 31 ಮಾರ್ಚ್ 2024 ರ ವರೆಗೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ಕೆಳಕಂಡಂತಿದೆ.<br>• ಬಯಲು ಮಲ ಮೂತ್ರ ವಿಸರ್ಜನೆಯನ್ನು ತೊಡೆದು ಹಾಕುವುದು<br>• ಅವ್ಯವಸ್ಥಿತ/ ಅನುಪಯುಕ್ತ ಶೌಚಾಲಯಗಳನ್ನು ಹರಿ ನೀರು ಶೌಚಾಲಯವಾಗಿ ಪರಿವರ್ತಿಸುವುದು,<br>• ನಗರ ಪ್ರದೇಶದಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ವಸ್ತುಗಳ ಸಂಗ್ರಹಣೆ, ಮರುಬಳಕೆ, ವೈಜ್ಞಾನಿಕ ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವುದು.<br>• ನೈರ್ಮಲ್ಯ ಮತ್ತು ಆರೋಗ್ಯದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು.<br><br>ಯೋಜನೆಯು ಈ ಕೆಳಕಂಡ ಘಟಕಗಳನ್ನು ಹೊಂದಿರುತ್ತದೆ.<br>1. ವೈಯಕ್ತಿಕ ಶೌಚಾಲಯ ನಿರ್ಮಾಣ<br>2. ಸಮುದಾಯ/ಸಾರ್ವಜನಿಕ ಶೌಚಾಲಯ ನಿರ್ಮಾಣ<br>3. ಘನತ್ಯಾಜ್ಯ ನಿರ್ವಹಣೆ<br>4. ಮಾಹಿತಿ, ಶಿಕ್ಷಣ ಮತ್ತು ಸಂಹವನ (IEC)<br>5. ಸಾಮರ್ಥ್ಯಾಭಿವೃದ್ಧಿ<br><br>**ಸ್ವಚ್ಛ ಭಾರತ ಮಿಷನ್ (ನಗರ)- 2.0** ಯೋಜನೆಯನ್ನು 5 ವರ್ಷಗಳಿಗೆ ಜಾರಿಗೊಳಿಸಿದ್ದು, ದಿನಾಂಕ: 02-10-2021 ರಿಂದ 01-10-2026 ರವರೆಗೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯ ಪ್ರಮುಖ ಉದ್ದೇಶವು<br>• ಎಲ್ಲಾ ನಗರಗಳನ್ನು Garbage free city ಯನ್ನಾಗಿ ಪರಿವರ್ತಿಸುವುದು,<br>• ನಗರಗಳ ODF ಪ್ರಮಾಣೀಕರಣವನ್ನು ಉಳಿಸಿಕೊಳ್ಳುವುದು<br>• IEC ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವುದು & ಎಲ್ಲಾ ಹಿತಾಸಕ್ತಿದಾರರಿಗೆ ತರಬೇತಿಗಳ ಮೂಲಕ ಸಾಮರ್ಥ್ಯಾಭಿವೃದ್ಧಿಗೊಳಿಸುವುದು.<br><br>ಯೋಜನೆಯು ಈ ಕೆಳಕಂಡ ಘಟಕಗಳನ್ನು ಹೊಂದಿರುತ್ತದೆ. |

1. ಸುಸ್ಥಿರ ಘನತ್ಯಾಜ್ಯ ನಿರ್ವಹಣೆ
2. ಸುಸ್ಥಿರ ನೈರ್ಮಲ್ಯ
3. ಬಳಸಿದ ನೀರಿನ ನಿರ್ವಹಣೆ (ಒಂದು ಲಕ್ಷ ಜನಸಂಖ್ಯೆಗಿಂತ ಕಡಿಮೆಯಿರುವ ನಗರಗಳು)
4. ಐ.ಇ.ಸಿ.
5. ಸಾಮರ್ಥ್ಯಾಭಿವೃದ್ಧಿ

(ಆ) ರಾಜ್ಯದಲ್ಲಿ ಸ್ವಚ್ಛ ಭಾರತ್ ಅಭಿಯಾನ (ನಗರ) ಅಡಿಯಲ್ಲಿ ಹಂತ-1 ಮತ್ತು ಹಂತ-2ರಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು; ಗುರಿ-ಸಾಧನೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು);

**ಸ್ವಚ್ಛ ಭಾರತ ಮಿಷನ್ (ನಗರ) ಹಂತ-1**ರಲ್ಲಿ ಘಟಕವಾರು ಪ್ರಗತಿ ಈ ಕೆಳಕಂಡಂತಿದೆ.

**<u>ಶೌಚಾಲಯಗಳ ನಿರ್ಮಾಣ</u>**

| ಘಟಕಗಳು | ಗುರಿ | ಸಾಧನೆ |
|---|---|---|
| ವೈಯಕ್ತಿಕ ಶೌಚಾಲಯ | 3.2 ಲಕ್ಷ ಸೀಟ್ | 3.19 ಲಕ್ಷ ಸೀಟ್ |
| ಸಮುದಾಯ ಶೌಚಾಲಯ | 11,033 ಸೀಟ್ | 11,033 ಸೀಟ್ |
| ಸಾರ್ವಜನಿಕ ಶೌಚಾಲಯ | 5,407 ಸೀಟ್ | 5,407 ಸೀಟ್ |

**ಘನತ್ಯಾಜ್ಯ ವಸ್ತುಗಳ ನಿರ್ವಹಣೆ:**

ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ವಾಹನ ಯಂತ್ರೋಪಕರಣಗಳ ಖರೀದಿ, ತ್ಯಾಜ್ಯ ಸಂಸ್ಕರಣೆಗೆ ಅಗತ್ಯವಿರುವ Windrow platform, Processing shed, Trommel screen, Leachate collection tank, Compound wall, Weigh Bridge, Security room ಇತ್ಯಾದಿ ಕಾಮಗಾರಿಗಳನ್ನು ಪ್ರಸ್ತಾಪಿಸಿ ಡಿ.ಪಿ.ಆರ್ ಸಿದ್ಧಪಡಿಸಿ ಜಿಲ್ಲಾ ಹಾಗು ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯನ್ನು ಪಡೆಯಲಾಗಿರುತ್ತದೆ. 218 ನಗರ ಸ್ಥಳೀಯ ಸಂಸ್ಥೆಗಳ ಅನುಮೋದಿತ ಯೋಜನಾ ವರದಿಯ ರೀತ್ಯಾ 5323 ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳ ಪೈಕಿ 4188 ಪೂರ್ಣಗೊಂಡಿರುತ್ತದೆ ಹಾಗೂ 1135 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

**ಐ.ಇ.ಸಿ**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ಅನುಷ್ಠಾನಗೊಳಿಸುವ ಕುರಿತಾಗಿ,ಸಾರ್ವಜನಿಕರಿಗೆ / ವಿವಿಧ ಹಿತಾಸಕ್ತಿದಾರರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರಾಜ್ಯ ಮಟ್ಟದಲ್ಲಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಕೈಗೊಳ್ಳಲಾಗಿರುತ್ತದೆ,

**ಸಾಮರ್ಥ್ಯಾಭಿವೃದ್ಧಿ**

ನಗರ ಪ್ರದೇಶದ ನೈರ್ಮಲ್ಯ ಹಾಗು ತ್ಯಾಜ್ಯ ನಿರ್ವಹಣೆ ಕುರಿತಾಗಿ ಚುನಾಯಿತ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ. ಪೌರಕಾರ್ಮಿಕರಿಗೆ ಕಾರ್ಯಾಗಾರವನ್ನು ಕೈಗೊಳ್ಳಲಾಗಿರುತ್ತದೆ.

**ಸ್ವಚ್ಛ ಭಾರತ ಮಿಷನ್ (ನಗರ) ಹಂತ 2**

ಈ ಯೋಜನೆಯ ಘನತ್ಯಾಜ್ಯ ನಿರ್ವಹಣೆ, ಸುಸ್ಥಿರ ನೀರಿನ ನಿರ್ವಹಣೆ, ಐ.ಇ.ಸಿ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಬಳಸಿದ ನೀರಿನ ನಿರ್ವಹಣೆಯ ಕ್ರಿಯಾಯೋಜನೆಗೆ ರಾಜ್ಯ ಮಟ್ಟದ ಸಮಿತಿಯ

(ಇ) ರಾಜ್ಯಕ್ಕೆ ಈ ಅಭಿಯಾನದಡಿ ಇದುವರೆವಿಗೆ ಕೇಂದ್ರ ಸರ್ಕಾರದಿಂದ ದೊರೆತಿರುವ ನೆರವುಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

ಕೇಂದ್ರ ಸರ್ಕಾರವು ಸ್ವಚ್ಛ ಭಾರತ್ ಮಿಷನ್ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರ ರೀತ್ಯಾ ಕೇಂದ್ರ ಸರ್ಕಾರ ಒದಗಿಸುವ ಅನುದಾನಕ್ಕೆ 60:40 ಅನುಪಾತದಡಿ ರಾಜ್ಯ ಸರ್ಕಾರವು ಅನುದಾನವನ್ನು ಒದಗಿಸಬೇಕಿರುತ್ತದೆ. ಕೇಂದ್ರ ಹಾಗು ರಾಜ್ಯ ಸರ್ಕಾರದಿಂದ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ.

**ಸ್ವಚ್ಛ ಭಾರತ ಮಿಷನ್ (ನಗರ)- 1.0** ಯೋಜನೆಯಡಿ ಕೇಂದ್ರ ಹಾಗು ರಾಜ್ಯದಿಂದ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ.

(ರೂ ಕೋಟಿಗಳು )

| **ಘಟಕಗಳು** | **ಕೇಂದ್ರದ ಬಿಡುಗಡೆ** | ರಾಜ್ಯದ ಬಿಡುಗಡೆ | ಒಟ್ಟು ಬಿಡುಗಡೆ |
|---|---|---|---|
| ವೈಯಕ್ತಿಕ ಶೌಚಾಲಯ | 157.79 | 105.20 | 262.98 |
| ಸಮುದಾಯ/ ಸಾರ್ವಜನಿಕ ಶೌಚಾಲಯ | 41.03 | 27.35 | 68.38 |
| ಘನತ್ಯಾಜ್ಯ ನಿರ್ವಹಣೆ | 512.52 | 341.68 | 854.20 |
| ಐ.ಇ.ಸಿ | 17.62 | 11.75 | 29.37 |
| ಬಲವರ್ಧನೆ, ಆಡಳಿತ ಮತ್ತು ಕಛೇರಿ ವೆಚ್ಚ | 29.66 | 19.65 | 49.31 |
| ಒಟ್ಟು | **758.62** | **505.63** | **1264.24** |

**ಸ್ವಚ್ಛ ಭಾರತ ಮಿಷನ್ (ನಗರ)- 2.0** ಯೋಜನೆಯಡಿ ಕೇಂದ್ರ ಹಾಗು ರಾಜ್ಯದಿಂದ ಬಿಡುಗಡೆಯಾದ ವಿವರ ಕೆಳಕಂಡಂತಿದೆ.

(ರೂ ಕೋಟಿಗಳು )

| **ಘಟಕಗಳು** | **ಕೇಂದ್ರದ ಬಿಡುಗಡೆ** | **ರಾಜ್ಯದ ಬಿಡುಗಡೆ** | **ಒಟ್ಟು ಬಿಡುಗಡೆ** |
|---|---|---|---|
| ಸುಸ್ಥಿರ ಘನತ್ಯಾಜ್ಯ ನಿರ್ವಹಣೆ | 11.48 | 7.65 | 19.13 |
| ಬಳಸಿದ ನೀರಿನ ನಿರ್ವಹಣೆ | | | |
| ಐ.ಇ.ಸಿ | 55.11 | 36.74 | 91.85 |
| ಸಾಮರ್ಥ್ಯಾಭಿವೃದ್ಧಿ | 27.68 | 18.45 | 46.13 |
| ಒಟ್ಟು | **94.27** | **62.84** | **157.11** |

(ಈ) ರಾಜ್ಯದಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಮತ್ತು ರಾಜ್ಯದಲ್ಲಿ ಪ್ರವಾಸಿಗರ ಅನುಗುಣವಾಗಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು)

- ನಗರ /ಪಟ್ಟಣಗಳಿಗೆ ಬಂದು ಹೋಗುವ ಜನ ಸಂಖ್ಯೆಯ ಮೇರೆಗೆ ಪುರುಷರಿಗೆ 1:100 ಹಾಗು ಮಹಿಳೆಯರಿಗೆ 1:50 ಅನುಪಾತದಲ್ಲಿ ಸೀಟ್ ಗಳ ಸಂಖ್ಯೆಯನ್ನು ನಿರ್ಧರಿಸಬೇಕಿರುತ್ತದೆ.
- ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಗತ್ಯಾನುಸಾರ 5407 ಸೀಟ್ ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛ ಭಾರತ್ ಮಿಷನ್ (ನಗರ) 1.0 ಅಡಿ ನಿರ್ಮಿಸಲಾಗಿರುತ್ತದೆ.
- ಸ್ವಚ್ಛ ಭಾರತ ಮಿಷನ್ (ನಗರ)-2.0ರ ಮಾರ್ಗಸೂಚಿಯ ರೀತ್ಯಾ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಮಾರುಕಟ್ಟೆ ಪ್ರದೇಶ, ಮೆಟ್ರೊ ನಿಲ್ದಾಣ, ಪ್ರವಾಸಿ ತಾಣಗಳು, ಧಾರ್ಮಿಕ ಸ್ಥಳಗಳು, ಆರೋಗ್ಯ ಕೇಂದ್ರಗಳ 500 ಮೀಟರ್ ವ್ಯಾಪ್ತಿಯಲ್ಲಿ ಅಗತ್ಯವಿರುವಷ್ಟು ಶೌಚಾಲಗಳು, ಮೂತ್ರಾಲಯಗಳು ಲಭ್ಯವಿರಬೇಕಿರುತ್ತದೆ.

ಅನುಮೋದನೆಯಾಗಿದ್ದು, ಕೇಂದ್ರದ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ. ಉಪಘಟಕವಾರು ಪ್ರಗತಿ ವರದಿ ಕೆಳಕಂಡಂತಿದೆ.

(ರೂ ಕೋಟಿಗಳು)

| ಘಟಕಗಳು | ಒಟ್ಟು ಅನುಮೋದಿತ ಯೋಜನೆ ಮೊತ್ತ | ಪ್ರಗತಿ ವರದಿ |
|---|---|---|
| ಸುಸ್ಥಿರ ಘನತ್ಯಾಜ್ಯ ನಿರ್ವಹಣೆ | 2059.11 | • 91 ಹೊಸದಾಗಿ ರಚಿಸಲಾದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 63 ನಗರಗಳು ಜಮೀನು ಹೊಂದಿದ್ದು, ಈ ಪೈಕಿ 12 ನಗರ ಸ್ಥಳೀಯ ಸಂಸ್ಥೆಗಳ ಡಿ.ಪಿ.ಆರ್ ಅನುಮೋದನೆಯಾಗಿರುತ್ತ 17 ಯೋಜನಾ ವರದಿಗಳು ಪರಿಶೀಲನೆಯಲ್ಲಿರುತ್ತದೆ. ಉಳಿದ ಪಟ್ಟಣಗಳು ಡಿ.ಪಿ.ಆರ್ ಸಿದ್ಧಪಡಿಸುವ ಹಂತದಲ್ಲಿರುತ್ತವೆ.<br>• ಪಾರಂಪರಿಕ ತ್ಯಾಜ್ಯ ನಿರ್ವಹಣೆಯಡಿ 195 ನಗರಗಳ ಪೈಕಿ 184 ಡಿ.ಪಿ.ಆರ್ ಅನುಮೋದನೆಯಾಗಿದೆ. 33 ನಗರಗಳಲ್ಲಿ ಕೆಲಸ ಚಾಲನೆಯಲ್ಲಿರುತ್ತದೆ. 11 ನಗರಗಳು ಡಿ.ಪಿ.ಆರ್ ಸಿದ್ಧಪಡಿಸುವ ಹಂತದಲ್ಲಿರುತ್ತದೆ. |
| ಬಳಸಿದ ನೀರಿನ ನಿರ್ವಹಣೆ | 2284.2 | KUIDFC ಸಂಸ್ಥೆಯು ನೋಡಲ್ ಸಂಸ್ಥೆಯಾಗಿರುತ್ತದೆ. ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ನಗರಗಳಿಗೆ STP ನಿರ್ಮಾಣ, I&D ಕಾಮಗಾರಿಗಳು ಹಾಗು Cesspool ಯಂತ್ರಗಳನ್ನು ಖರೀದಿಸಲು ಕ್ರಿಯಾಯೋಜನೆ ಸಿದ್ಧಪಡಿಸಿದ್ದು, ಅನುಮೋದನೆ ಹಂತದಲ್ಲಿರುತ್ತದೆ. |
| ಸುಸ್ಥಿರ ನೈರ್ಮಲ್ಯ | 177.91 | ವೈಯಕ್ತಿಕ ಶೌಚಾಲಯ, ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯ ನಿರ್ಮಾಣ ಮಾಡಲು ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ, ನಗರಗಳು ಶೌಚಾಲಯ ನಿರ್ಮಾಣದ ಅಂದಾಜು ಸಿದ್ಧಪಡಿಸಿದ್ದು, ಟೆಂಡರ್ ಕರೆಯುವ ಹಂತದಲ್ಲಿರುತ್ತದೆ. |
| ಐ.ಇ.ಸಿ | 367.46 | ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ, ಕೇಂದ್ರ ಸರ್ಕಾರವು ಮಾಹೆಯಾನ ನಿಗದಿಪಡಿಸುವ ಚಟುವಟಿಕೆಗಳನ್ನು ನಗರಗಳಲ್ಲಿ ಕೈಗೊಳ್ಳಲಾಗುತ್ತಿದೆ. |
| ಸಾಮರ್ಥ್ಯಾಭಿವೃದ್ಧಿ | 184.53 | ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ. ರಾಜ್ಯ ಹಾಗು ನಗರಗಳ ಮಟ್ಟದಲ್ಲಿ ನೈರ್ಮಲ್ಯ ಕುರಿತು ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. |

| | | |
|---|---|---|
| | | • ಮಾರ್ಗಸೂಚಿಯ ರೀತ್ಯಾ ಹೆಚ್ಚು ಪ್ರವಾಸಿ ತಾಣಗಳು, ಹೆಚ್ಚು ಧಾರ್ಮಿಕ ಸ್ಥಳಗಳು ಇರುವ ನಗರಗಳಲ್ಲಿ Aspirational Toilets ಗಳನ್ನು ಪ್ರಸ್ತಾಪಿಸಬಹುದಾಗಿರುತ್ತದೆ. ಪುರುಷರಿಗೆ, ಸ್ತ್ರೀಯರಿಗೆ, ವಿಕಲಚೇತನರಿಗೆ ಹಾಗೂ ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಶುದ್ಧ ಗಾಳಿ, ಬೆಳಕು, ನೀರಿನ ವ್ಯವಸ್ಥೆಯಿದ್ದು, ಆಧುನಿಕ ಉಪಕರಣಗಳಿರಬೇಕು ಹಾಗೂ ಸುತ್ತಮುತ್ತ ಗಿಡಮರಗಳು (green belt) ಇರಬೇಕು.<br>• ಸದರಿ ಮಾನದಂಡಗಳ ರೀತ್ಯಾ ನಗರ ಸ್ಥಳೀಯ ಸಂಸ್ಥೆಗಳು ಅಗತ್ಯವಿರುವ ಸಾರ್ವಜನಿಕ ಶೌಚಾಲಯಗಳನ್ನು ವಿಶ್ಲೇಷಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿರುತ್ತದೆ. ಅದರಂತೆ 309 ನಗರ ಸ್ಥಳೀಯ ಸಂಸ್ಥೆಗಳಿಗೆ (ಬಿಬಿಎಂಪಿ ಹೊರತುಪಡಿಸಿ) 2481 ಸೀಟ್ ಸಾರ್ವಜನಿಕ ಶೌಚಾಲಯ, 1223 ಸೀಟ್ Aspirational Toilets ಹಾಗೂ 2,726 ಸೀಟ್ ಮೂತ್ರಾಲಯ ನಿರ್ಮಿಸಲು ರಾಜ್ಯ ಹಾಗು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ನಗರಗಳು ಸದರಿ ಶೌಚಾಲಯ ನಿರ್ಮಾಣದ ವಿನ್ಯಾಸ ಮತ್ತು ಅಂದಾಜು ಪಟ್ಟಿ ಸಿದ್ಧಪಡಿಸುವ ಹಂತದಲ್ಲಿರುತ್ತದೆ. |

ಸಂ: ನಅಇ 163 ಸಿಎಸ್ಎಸ್ 2023

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು